# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 377(518)
ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ್ ಅರಳಿ
(ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 09-03-2020.
ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಬೀದರ್ ಜಿಲ್ಲೆಯಲ್ಲಿ ಸರ್ಕಾರದಿಂದ ಷರತ್ತು ಬದ್ಧವಾಗಿ ಶಾಲೆ ಪ್ರಾರಂಭಿಸಲು ಪರವಾನಗಿ ಪಡೆದು ಯಾವುದೇ ಮೂಲ ಸೌಕರ್ಯಗಳನ್ನು ನೀಡದೆ ಶೆಡ್ ನಲ್ಲಿ ಮಕ್ಕಳಿಗೆ ಪಾಠ ಮಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ. | ಬಂದಿದ್ದಲ್ಲಿ, ಆ ಶಾಲೆಗಳ ವಿರುದ್ಧ ಸರ್ಕಾರದ ಕ್ರಮವೇನು; | ಅಂತಹ 3 ಶಾಲೆಗಳ (1.ಇನ್ಫಂಟ್ ಜಿಜಸ್ ಹಿರಿಯ ಪ್ರಾಥಮಿಕ ಶಾಲೆ ಯಾಕತಪೂರ ತಾ:ಜಿ:ಬೀದರ. 2.ಸ್ವಾಮಿ ವಿವೇಕಾನಂದ ಹಿರಿಯ ಪ್ರಾಥಮಿಕ ಶಾಲೆ ತೋರಣಾ ತಾ:ಔರಾದ 3.ಸಿದ್ಧಮ್ಮಾ ಹಿರಿಯ ಪ್ರಾಥಮಿಕ ಶಾಲೆ ಕಮಲನಗರ ತಾ:ಔರಾದ) ಆಡಳಿತ ಮಂಡಳಿಯವರಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸುವಂತೆ ಉಪನಿರ್ದೇಶಕರು, ಸಾ.ಶಿ.ಇ., ಬೀದರ್ ರವರರಿಂದ ಸಂಬಂಧಿಸಿದ ಶಾಲಾ ಆಡಳಿತ ಮಂಡಳಿ ಹಾಗೂ ಮುಖ್ಯ ಗುರುಗಳಿಗೆ ಸಹ ನೋಟಿಸ್ ಜಾರಿ ಮಾಡಲಾಗಿರುತ್ತದೆ. ಆಡಳಿತ ಮಂಡಳಿಯವರಿಂದ ಸಮಾಜಾಯಿಷಿ ಪಡೆದು ಪರಿಶೀಲಿಸಿ, ಇಲಾಖೆಯ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತದೆ. |
| ಇ. | ಬಾರದಿದ್ದಲ್ಲಿ, ಇದಕ್ಕೆ ಕಾರಣರು ಯಾರು; ಅವರ ವಿರುದ್ಧ ಕೈಗೊಂಡ ಕ್ರಮವೇನು? | ಮೇಲಿನಂತೆ |

**ಇಡಿ 40 ಪಿಎಂಸಿ 2020**

[ಎಸ್.ಸುರೇಶ್ ಕುಮಾರ್]
**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು**